ತಮ್ಮ ಹೆಸರನ್ನೂ ಬದಲಾಯಿಸಿಕೊಂಡು ಬಿಟ್ಟಿದ್ದಾರೆ. ಇಲ್ಲಿಯ ಜನರಿಗೆ ಕರೆಯಲು ಅನುಕೂಲವಾಗುವ ಹಾಗೆ. ಹಾಗಾದರೆ ಹುಟ್ಟಿನ ಹೆಸರು..... ಅವರ ನೆನಪಿನಿಂದಲೇ ಮಾಸಿಹೋಗಿರಬಹುದು. ನಾನೊಬ್ಬಳೇ, ನನ್ನ ಹುಟ್ಟು, ನನ್ನ ನಾಡು, ನನ್ನ ಮಣ್ಣು ಎಂದೆಲ್ಲಾ ಮರುಗುತ್ತಾ, ನೆನ್ನೆಗಳ ಮರೆಯಲಾರದೆ, ನಾಳೆಗಳಿಗೆ ಹೆದರಿ ಪ್ರತಿಕ್ಷಣವೂ ಸತ್ತು ಜೀವಿಸುತ್ತಿರುವ ಸೂತ್ರದ ಬೊಂಬೆ. ಒಮ್ಮೊಮ್ಮೆ ನನಗೇ ಅರ್ಥವಾಗದ ಸಂದಿಗ್ಧ ಪರಿಸ್ಥಿತಿ. ನಾನೇಕೆ ಜೀವನವನ್ನು ಸ್ಥಳ ಹಾಗೂ ಸಮಯದ ನಿರ್ಬಂಧನೆಗೆ ಒಳಪಡಿಸಿಕೊಂಡಿದ್ದೇನೆ? ಜೀವನ, ಸ್ಥಳ ಹಾಗೂ ಸಮಯವನ್ನು ಮೀರಿರುವಂತಹದ್ದೇ? ಅಥವಾ 'ಜೀವನ' ತನಗೆ ಬೇಕಾದ ಸ್ಥಳ ಹಾಗೂ ಸಮಯವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಕಳೆದುಕೊಂಡಿದೆಯೇ? ನನ್ನ ಮುಂದಿರುವ ತುಳಸಿ, ಈ ಪವಿತ್ರ ತುಳಸಿ ಇಲ್ಲಿಯೂ ಬೆಳೆಯುತ್ತಿದೆ. ಇದಕ್ಕೇನೂ ದೂರುಗಳಿಲ್ಲವೇ – ತನ್ನ ಇರುವಿನ ಬಗ್ಗೆ? ಛೆ! ಇದ್ಯಾವ ತರ್ಕದಲ್ಲಿ ಬಿದ್ದೆ. ಇಂದೇನೂ ಹೊಸದಲ್ಲ. ಪ್ರತಿನಿತ್ಯ ಇದೇ ದ್ವಂದ್ವ. ಇದೇ ಮನಸ್ಸಿನ ಗೊಂದಲ. 'Mom, Roger is coming to meet you and dad..' ನನ್ನ ಮಗಳು ಸಂಯುಕ್ತಾ ಒಳಗಿನಿಂದ ಕೂಗುತ್ತಾ ಬಂದಳು. Mom you and your TULASI... Hurry up Mom. I've got to get some snacks.

ನನ್ನ ಮಗಳು ಸಂಯುಕ್ತಾ ತಾನೇ ಒಬ್ಬ American ಹುಡುಗನನ್ನು ಆರಿಸಿಕೊಂಡಿದ್ದಾಳೆ. ಆ ಹುಡುಗ ವಿದ್ಯಾವಂತ, ವಿನಯವಂತ, ಆದರೂ ನನ್ನ ಮನ ಮಾತ್ರ ಒಪ್ಪದು. ಆ ಬಿಳಿಯ ತೊಗಲು, ಆ ಸಂಸ್ಕೃತಿ, ನನ್ನ ಮಗಳೇಕೆ ಹೀಗೆ ಮಾಡಿದಳು? ಎಂದು ಕೇಳುವಂತಿಲ್ಲ. ಈ ದೇಶವೇ ಹೀಗೆ. ನಮ್ಮತನ, ನಮ್ಮ ಗುರುತನ್ನೇ ನುಂಗಿ ಹಾಕಿಬಿಡುವ ರಾಕ್ಷಸ ದೇಶ. ನಾನು ಲಗುಬಗೆಯಿಂದ ಅಡುಗೆ ಮನೆಯ ಕಡೆಗೆ ನಡೆದೆ.

ಎಲ್ಲಾ ಎಷ್ಟು ವಿಚಿತ್ರ. ನಾವು ನಾವೇ, ಆದರೆ ದೇಶ, ಸಂಸ್ಕೃತಿಯ ಅಂತರದ ಕಂದರ ಬಹುದೊಡ್ಡದು. ಮನೆಯನ್ನು ಅಚ್ಚುಕಟ್ಟು ಮಾಡುತ್ತಾ, ಅವರಿಗಿಷ್ಟ ಬರುವ ಎಂದರೆ ಅಮೆರಿಕನ್ನರ ಉಪ್ಪು ಖಾರವಿಲ್ಲದ snacks ಅನ್ನು ತಯಾರಿಸುತ್ತಾ... ನನ್ನವರು ನನ್ನನ್ನು ಮೊದಲ ಬಾರಿಗೆ ನೋಡಲು ಬಂದದ್ದನ್ನು ನೆನೆದು ಪುಳಕಗೊಂಡೆ. ನನ್ನ ನೋಡಲು ಗಂಡಿನ ಕಡೆಯವರು ಬರುತ್ತಾರೆ ಎಂದು ಮನೆಯಲ್ಲೆಲ್ಲಾ ಸಂಭ್ರಮ. ಇಪ್ಪತ್ತು ಸಾರಿ ಗಡಿಯಾರ ನೋಡುತ್ತಾ, ರಸ್ತೆ ಕಡೆಗೆ ದೃಷ್ಟಿ ನೆಟ್ಟು ಗರಿಗರಿಯಾದ ಬಟ್ಟೆತೊಟ್ಟು ಒಂದು ರೀತಿಯ ಗಾಬರಿ, ಚಿಂತೆ, ಸಂತೋಷ, ಆತಂಕ ಎಲ್ಲವನ್ನೂ ಏಕಕಾಲಕ್ಕೆ ವ್ಯಕ್ತಪಡಿಸುತ್ತಾ ಓಡಾಡುತ್ತಿದ್ದ ಅಪ್ಪ. ಅಡುಗೆಮನೆಯಲ್ಲಿ ಘಮಘಮ ಉಪ್ಪಿಟ್ಟು, ತುಪ್ಪದ ಕೇಸರಿಭಾತು, ಆಂಬೊಡೆ, ಇವೆಲ್ಲವನ್ನು ತಯಾರಿಸುತ್ತಾ ಮನೆಯನ್ನು ಸಜ್ಜುಗೊಳಿಸುತ್ತಾ, ನನ್ನನ್ನು ಬೇಗ ರೆಡಿಯಾಗು ಎಂದು ಗದರುತ್ತಾ ಮುಖದಲ್ಲೆ ನಗೆ ತುಂಬಿಕೊಂಡಿದ್ದ ಅಮ್ಮ, ನನ್ನನ್ನು ಅಣಕಿಸುತ್ತಾ, ಅಡುಗೆಮನೆಗೆ ಹೋಗಿ ರುಚಿನೋಡುವ ನೆಪದಲ್ಲಿ ಕೇಸರಿಭಾತು ನೆಕ್ಕುತ್ತಾ ಲಂಗ ತೊಟ್ಟು ಓಡಾಡುತ್ತಿದ್ದ ನನ್ನ ತಂಗಿ.... ಓಹ್, ಒಂದೇ, ಎರಡೇ, ನೆನಪಿಸಿಕೊಂಡರೆ ಈಗಿಂದೀಗಲೇ ಭಾರತಕ್ಕೆ ಹೊರಟುಬಿಡಲೇ?! ಬೆಳೆದು ನಿಂತ ನನ್ನ ಮಗಳನ್ನು ಮತ್ತೊಮ್ಮೆ ಗರ್ಭದಲ್ಲಿ ಬಚ್ಚಿಟ್ಟುಕೊಂಡು, ತಾಯ್ನಾಡಿನ ಮಣ್ಣಿನಲ್ಲಿ ಇವಳಿಗೆ ಮತ್ತೆ ಜನ್ಮ ನೀಡಲೇ? ಎಂಬೆಲ್ಲಾ ಆಲೋಚನೆಗಳು ನನ್ನನ್ನು ಮುತ್ತಿ ವಾಸ್ತವ ಮತ್ತು ಕನಸು ಇವರೆಡರ ವ್ಯತ್ಯಾಸವನ್ನೇ ಮರೆಸಿ ಹುಚ್ಚಿಯಂತಾಗಿಸುತ್ತವೆ. ಇಲ್ಲೆಲ್ಲಾ ಯಾವುದೂ ಮಹತ್ತರವಾದ ವಿಷಯವಲ್ಲ, ಯಾವುದೂ ಸಂಭ್ರಮಿಸುವ ವಿಷಯವಲ್ಲ. ಎಲ್ಲವೂ casual. ಮದುವೆಯಾದರೂ casual, ಮಗುವಾಯಿತೆಂದರೂ casual, ಸತ್ತರೂ – ಅಬ್ಬಬ್ಬ ಎಂದರೆ ಒಂದು ದಿನ ಮೌನವಾಚರಿಸಿ ಕೆಲಸಕ್ಕೆ ತೆರಳುವ ಜನ. ಬಹಳ ಮೆಕ್ಯಾನಿಕಲ್, ನಮ್ಮಲ್ಲಿರುವಂತಹ ಆ ಕುತೂಹಲದ ಅಂಶ ಇವರಲ್ಲಿ ನಾ ಕಾಣಲಿಲ್ಲ.

ಸಂಯುಕ್ತಾ ಕಾರಿನಿಂದಿಳಿದ ಸದ್ದು ಕೇಳಿಸಿತು. ತೆಕ್ಕೆ ತುಂಬಾ ಹೂಗಳನ್ನೆತ್ತಿಕೊಂಡು ಇನ್ನೊಂದು ಕೈಯಲ್ಲಿ ಫ್ರೆಶ್ ಜ್ಯೂಸ್ ಕ್ಯಾನ್‌ಗಳನ್ನು ಹಿಡಿದು ಬಂದಳು. ನಾನು ಮೆಲ್ಲಗೆ ಅವಳ ಬಳಿ ಹೋದೆ. ಅವಳು ಯಾವುದೋ ಹಾಡು ಗುನುಗುನಿಸುತ್ತಾ ಹೂದಾನಿಯಲ್ಲಿ ಹೂ ಜೋಡಿಸುತ್ತಿದ್ದಳು. ಸಂಯುಕ್ತಾ, ನೀನು ಹೀಗೇ ಪ್ಯಾಂಟ್ ಹಾಕಿಕೊಂಡು, ....ಅಲ್ಲಾ ಒಂದು ಸ್ವಲ್ಪ ಅಲಂಕಾರ..." ಸಂಯುಕ್ತ ಜೋರಾಗಿ ನಗುತ್ತಾ... 'Dad! Dad! Mom will never change! Mummy!ಇದು ನಿನ್ ಕಾಲ ಅಲ್ಲ..., ನಿನ್ ದೇಶ ಅಲ್ಲ.... ನಿನ್ ಥರ .... ಮಾಡ್ಕೊಂಡ್ ಹುಡುಗನಿಗೆ